# ಛತ್ರದಲ್ಲಿ ಮದುವೆ, ಹೋಟೆಲ್‌ನಲ್ಲಿ ವಾಸ್ತವ್ಯ!

■ ಎಂ.ಆರ್. ಮುಕುಂದ



ಚಿತ್ರ: ವಿಜಯಕುಮಾರಿ

ನಮ್ಮ ಸ್ನೇಹಿತ ರಮೇಶನಿಗೆ ಮದುವೆ ನಿಶ್ಚಯವಾಗಿತ್ತು. ಹಾಸನದಲ್ಲಿ ಮದುವೆ. ಬಸ್, ಮೈಸೂರಿನಿಂದ ಹಾಸನಕ್ಕೆ ಪ್ರತ್ಯೇಕವಾಗಿ ಏರ್ಪಾಡಾಗಿತ್ತು. ನಾವು 4 ಜನ ಸ್ನೇಹಿತರು ಬಸ್ಸಿನಲ್ಲೇ ಹೋಗಿದ್ವಿ. ಛತ್ರ ಚನ್ನಾಗಿತ್ತು, ದೊಡ್ಡ-ದಾಗಿಯೂ ಇತ್ತು. 10 ರೂಮುಗಳಿದ್ದವು. ನಮಗೆ 5 ರೂಮುಗಳನ್ನು ಬಿಟ್ಟು-ಕೊಟ್ಟಿದ್ದರು. ಅವರ ಬಳಗ ದೊಡ್ಡದು. ಮೈಸೂರಿನಿಂದ, ಬೆಂಗಳೂರಿನಿಂದಲೂ ನೆಂಟರಿಷ್ಟರು ಬಂದಿದ್ದರು. ಬೀಗರು ಅಲ್ಲಿ ಒಬ್ಬ ಬ್ಯಾಂಕ್ ಮ್ಯಾನೇಜರ್‌ರವರ ಖಾಲಿ ಬಂಗಲೆಯನ್ನೂ ಬಿಡಿಸಿಕೊಂಡಿದ್ದರು. ರಮೇಶನ 3 ಜನ ತಮ್ಮಂದಿರು, ಇಬ್ಬರು ಜನ ತಂಗಿಯರು ಅಲ್ಲಿಗೇ ಹೊರಟರು. ನಮ್ಮನ್ನೂ ಕರೆದರು.

ನಮಗೆ ನಾಲ್ಕೂ ಜನರಿಗೆ ತುಂಬಾ ಸಂಕೋಚ, ಜೊತೆಗೆ ನಮಗೆ ಸ್ನಾನಗೃಹ, ಟಾಲೈಟ್ ನೀಟಾಗಿರದಿದ್ದರೆ ಸರಿ ಹೋಗುತ್ತಿರಲಿಲ್ಲ. ಛತ್ರ ಅಂದ್ರೆ 5-6 ಸ್ನಾನಗೃಹ, ಟಾಯ್ಲೆಟ್ ಇದ್ದವು. ಅಲ್ಲಿ 40 ಜನರಾದರೂ ಇದ್ರು. ನಮಗೆ ಸರಿಹೋಗಲ್ಲ ಎಂದು ಅಲ್ಲಿರುವ ಒಂದು ಲಾಡ್ಜ್‌ನಲ್ಲಿ ಒಂದು ಡಬಲ್ ರೂಮ್ ಮಾಡಿ, ಎರಡು ಎಕ್ಸ್‌ಟ್ರಾ ಹಾಸಿಗೆ ಹಾಕಿಸಿಕೊಂಡೆವು. ರೂಮ್ ವಿಶಾಲವಾಗಿತ್ತು. ಸೋಫಾ ಸೆಟ್ಟು, ಡ್ರೆಸಿಂಗ್ ಟೇಬಲ್ ಮತ್ತು ಬಾಲ್ಕನಿ, ಫೋನ್, ಫ್ಯಾನ್ ಎಲ್ಲವೂ ಇತ್ತು. ಅಟಾಚ್ಡ್ ಬಾತ್‌ರೂಂ, 3-4 ಕಾಮನ್ ಬಾತ್‌ರೂಂ ಕೂಡಾ ಇದ್ದವು.

ಸಂತೋಷವಾಗಿ ದಣಿವಾರಿಸಿಕೊಂಡು ಊಟದ ಹೊತ್ತಿಗೆ ಛತ್ರಕ್ಕೆ ಹೋದ್ವಿ. ರಮೇಶ, ಅವನ ತಮ್ಮಂದಿರು, ತಂಗಿಯರಿಗೆ, ಅವನ ಕಡೆಯವರಿಗೆ ನಮ್ಮ ಮೇಲೆ ಕೋಪ ಬಂದಿತ್ತು. ಛತ್ರಕ್ಕೆ ಹೋಗುತ್ತಿದ್ದಂತೆಯೇ ಎಲ್ಲರೂ ತಲೆಗೊಂದು ಮಾತಾಡಿದರು. 'ಬಹಳ ಜಂಬಾಪ್ಪ... ನಾವೆಲ್ಲಾ ಇಲ್ವಾ, ಅಡ್ಜೆಸ್ಟ್ ಮಾಡಿ-ಕೊಂಡು ನೀವೂ ಇರಬೇಕಾಗಿತ್ತು..' ಅಂದರು. ನಾವು 'ಸಾರಿ' ಹೇಳಿದ್ವಿ. ಲಾಡ್ಜ್ ಬಗ್ಗೇನೂ ಹೇಳಿದ್ವಿ. 'ಸಾಹುಕಾರಪ್ಪ ನೀವು' ಎಂದೆಲ್ಲಾ ಹಾಸ್ಯ ಮಾಡಿದರು.

ರಾತ್ರಿ ಊಟ ಮುಗಿಸಿ ಒಂದು ವಾಕ್ ಹೋಗಿ 10 ಗಂಟೆಗೆ ಲಾಡ್ಜ್‌ಗೆ ಬಂದ್ವಿ. ಮಾರನೆ ದಿನ 10.30 ರಿಂದ 11 ಗಂಟೆಗೆ ಮುಹೂರ್ತ ಇತ್ತು. ನಾವೆಲ್ಲ 'ಲಾಡ್ಜ್‌ನಲ್ಲೇ ಬೆಳಿಗ್ಗೆ ಕಾಫಿ ಕುಡಿದು ರೆಡಿ ಆಗಿ 9 ಗಂಟೆಗೆ ತಿಂಡಿಗೆ ಹೋಗಿಬರೋಣ. ಬೆಳಿಗ್ಗೆ 7.30ಕ್ಕೆ ಏಳೋಣ' ಎಂದುಕೊಂಡು ಸುಮಾರು ಹೊತ್ತು ಹರಟೆ ಹೊಡೆದು ಮಲಗಿದೆವು.

ಬೆಳಿಗ್ಗೆ ಸುಮಾರು 5 ಗಂಟೆಗೆ ನಮ್ಮ ರೂಮಿನ ಬೆಲ್ಲಾಯ್ತು. ಬೇಜಾರು ಪಟ್ಟುಕೊಂಡು ಬಾಗಿಲು ತರೆದರೆ, ರಮೇಶನ ತಂದೆ, ತಮ್ಮ ಬಂದಿದ್ರು. ರಮೇಶನ ತಂದೆ 'ನೋಡ್ರಪ್ಪ, ಬೆಳಿಗ್ಗೆ ಸುಮಾರು ಶಾಸ್ತ್ರಗಳಿದೆಯಂತೆ. ಸ್ನಾನ ಮಾಡಿ ರೆಡಿಯಾಗಿರಿ ಅಂದಿದಾರೆ ಪುರೋಹಿತರು. 6 ಗಂಟೆಗೆ ಬರ್‍ತಾರೆ. ಛತ್ರದಲ್ಲಿ ಬರೀ ಹೆಂಗಸರು ಬಚ್ಚಲು ಮನೆಗೆ ಕ್ಯೂ ನಿಂತಿದ್ದಾರೆ. ನಾನು, ನನ್ನ ಮಗ ಸ್ನಾನ ಮುಗಿಸಿ ಹೋಗ್ತೀವಿ' ಎಂದು ಹೇಳಿ, ನಮ್ಮ ಉತ್ತರಕ್ಕೂ ಕಾಯದೇ ಬಾತ್‌ರೂಂಗೆ ಹೋದರು. ಅವರದ್ದಾದ ಮೇಲೆ ಅವರ ಮಗ, ಇಬ್ಬರೂ ಮುಗಿಸಿ ಹೊರಟರು.

ನಾವು ಮಲಗಿಕೊಂಡೆವು. ಒಂದು ಐದು ನಿಮಿಷಕ್ಕೆ ಅವನ ಇನ್ನೊಬ್ಬ ತಂಗಿ, ಇಬ್ಬರು ತಮ್ಮಂದಿರು ಬಂದು, 'ಮುಹೂರ್ತಕ್ಕೆ ಮುಂಚೆ ನಾವು ಹೆಣ್ಣುಮಕ್ಕಳು ಬಹಳ ಮುಖ್ಯವಾಗಿ ರೆಡಿ ಇರಬೇಕಂತೆ. ಆ ಬ್ಯಾಂಕ್ ಮೆನೇಜರ ಮನೇಲಿ ನೀರು 8 ಗಂಟೆ ಮೇಲೇನೇ ಬರೋದು' ಎಂದು ಹೇಳಿ 3 ಜನವೂ ಸ್ನಾನ ಮುಗಿಸಿ-ಕೊಂಡು ಹೋದರು. ನೀವು ನಿಧಾನಕ್ಕೆ ಬನ್ನಿ ಎಂದು ಸಲಹೆಯನ್ನೂ ನೀಡಿದರು.

ನಾವು 7.30ಕ್ಕೆ ಏಳೋಣಾಂತ ಮತ್ತೆ ಮಲಗಿದೆವು. ಹತ್ತು ನಿಮಿಷದಲ್ಲಿ ಮತ್ತೆ ಬೆಲ್ ಆಯಿತು. ಈಗ ರಮೇಶನ ಪಕ್ಕದ ಮನೆ ಅಂಕಲ್ ಅವರ ಹೆಂಡತಿ ಮಗ ಬಂದಿದ್ದರು. ಜಾಸ್ತಿ ಉಪಚಾರ ಹೇಳಿಸಿಕೊಳ್ಳದೆ ಸ್ನಾನ ಮುಗಿಸಿ-ಹೋದರು. ಹೋಗುವಾಗ ಸುಮ್ಮನೆ ಹೋಗಬಾರದೆಂದೋ ಏನೋ, 'ನೋಡಿದ್ರ.. ಎಂಥಾ ಕೆಲಸ ಮಾಡಿದಾನೆ ರಮೇಶ! ತನ್ನ ಸ್ನೇಹಿತರಿಗೆ ಹೋಟೆಲ್‌ನಲ್ಲಿ ರೂಮು, ನಮಗೆ ಛತ್ರ. ಅನ್ಯಾಯ, ಅನ್ಯಾಯ!' ಎಂದು ಬೈದುಕೊಂಡೇ ಹೋದರು.

ಇನ್ನು ಮಲಗಿದರೆ ಸುಖವಿಲ್ಲ. ಬೇರೆಯವರು ಬರೋದಕ್ಕಿಂತ ಮುಂಚೆ ಸ್ನಾನ ಮುಗಿಸೋಣ ಎಂದು ಎದ್ದು ರೆಡಿಯಾದೆವು. ಬೇಗನೆ ರೆಡಿಯಾಗಿ ಛತ್ರಕ್ಕೆ ಹೋಗೋಣಾಂತ 9 ಗಂಟೆಗೆ ಹೊರಟೆವು. ಅಷ್ಟರಲ್ಲಿ ರಮೇಶನ ಚಿಕ್ಕಪ್ಪ, ಸೋದರಮಾವ, ಅವರ ಹೆಂಡತಿ ಹಾಜರು! 'ನೋಡಪ್ಪ ನಮಗೆ ವಯಸ್ಸಾಗಿದೆ. ಯಾಕೋ ಈ ಮದುವೆ ತಿಂಡಿ ಸರಿಹೋಗಿಲ್ಲ. ರಾತ್ರಿ ಈ ಗಲಾಟೇಲಿ ನಿದ್ದೇನು ಸರಿಯಾಗಿ ಮಾಡಿಲ್ಲ. ನಾವು ಸ್ವಲ್ಪ ರೆಸ್ಟ್ ತೊಗೊಂಡು ಬರ್ತೀವಿ. ಊಟದ ಹೊತ್ತಿಗೆ ಬಂದು ಬಿಡ್ತೀವಿ' ಅಂತ ಹೇಳಿ ನಮ್ಮ ಅನುಮತಿಗೂ ಕಾಯದೆ ರೂಮಿನ ಒಳಗೆ ಬಂದು ಹಾಯಾಗಿ ಫ್ಯಾನ್ ಹಾಕಿಕೊಂಡು ಮಲಗಿದರು! ಮಾತಾಡೋ ಹಂಗಿಲ್ಲ, ಬಿಡೋ ಹಂಗಿಲ್ಲ!

ಛತ್ರಕ್ಕೆ ಬಂದು, ಲಗ್ನ ಮುಗಿಸಿಕೊಂಡು, ಊಟ ಮಾಡಿ ಮತ್ತೆ ರೂಮಿಗೆ ಹೋದರೆ ಯಾರೂ ಎದ್ದೇ ಇಲ್ಲ. ಬಲವಂತವಾಗಿ ಅವರನ್ನು ಎಬ್ಬಿಸಿ ಛತ್ರಕ್ಕೆ ಊಟಕ್ಕೆ ಕಳಿಸಿದೆವು. ನಮ್ಮ ರೂಮಿನಲ್ಲಿ 3 ತಂಪು ಪಾನೀಯದ ಬಾಟಲ್‌ಗಳು ಖಾಲಿ ಬಿದ್ದಿದ್ದವು. ಹೋಗುವ ಮುಂಚೆ, ರಮೇಶನ ಚಿಕ್ಕಪ್ಪ 'ನೋಡಪ್ಪ.. ಯಾಕೋ ಸಂಕಟ ಆಗ್ತಾ ಇತ್ತು. ಈ ತಂಪು ಪಾನೀಯ ತರಿಸಿಕೊಂಡಿದ್ವಿ, ದುಡ್ಡು ಇಸ್ಕೊಳ್ಳೇ ಇಲ್ಲ. ಬಿಲ್‌ನಲ್ಲಿ ಸೇರಿಸ್ತಾನಂತೆ. ಆ ಮೇಲೆ ಎಷ್ಟಾಯಿತೂಂತ ಹೇಳಪ್ಪ, ಕೊಡ್ತೀನಿ' ಅಂತ ಹೇಳಿ ಹೋದರು.

'ಅವರು ಕೊಟ್ರು, ನಾವು ಇಸ್ಕೊಂಡ್ವಿ' ಅಂದುಕೊಂಡು ಸಾಯಂಕಾಲ 5 ಗಂಟೆಗೆ ರೂಮ್ ಖಾಲಿ ಮಾಡಿ ಛತ್ರಕ್ಕೆ ಬಂದ್ವಿ. ಬಸ್ಸು ರೆಡಿಯಾಗಿತ್ತು ಮೈಸೂರಿಗೆ ಹೊರಡಲು. ಈ ಲಾಡ್ಜ್‌ನವನು 'ಏನು ಸಾರ್, ನೀವು 4 ಜನಕ್ಕೆ ನಾವು ರೂಮ್ ಕೊಟ್ಟಿದ್ದು, ನಿಮ್ಮ ಗೆಸ್ಟ್‌ಗಳೇ 10 ಜನ ಆದರಲ್ಲಾ' ಎಂದು ಹೇಳಿ, ಒಟ್ಟು ಎರಡೂವರೆಯಷ್ಟು ಬಾಡಿಗೆ ವಸೂಲಿ ಮಾಡೇಬಿಟ್ಟ! ಜೊತೆಗೆ ತಂಪು ಪಾನೀಯದ ಚಾರ್ಜು ಬೇರೆ!

ಹೇಗಿದೆ ನಮ್ಮ ಲಾಡ್ಜ್ ವೈಖರಿ?